ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕುಡಿಯುವ ನೀರು ವಿಷ ಮಿಶ್ರಿತವಿರುವುದಿಲ್ಲ.

ಆ. ರಾಯಚೂರು ಜಿಲ್ಲೆಯ 681 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರು ರಾಸಾಯನಿಕವಾಗಿ ಕಲುಷಿತಗೊಂಡಿದ್ದು, ಈ ಪೈಕಿ 205 ಜನವಸತಿಗಳು ಸಿಂಧನೂರು ತಾಲ್ಲೂಕಿನಲ್ಲಿವೆ. ಇಂತಹ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಸಬ್-ಮಿಷನ್ ಕಾರ್ಯಕ್ರಮದಡಿ ತೆಗೆದುಕೊಳ್ಳಲಾಗುತ್ತದೆ. ಸಿಂಧನೂರು ತಾಲ್ಲೂಕಿನಲ್ಲಿ (1) ಬದಕೂಗೂರು ಮತ್ತು ಇತರ 17 ಗ್ರಾಮಗಳು (2) ಗೋರೆಬಾಳ್ ಮತ್ತು ಇತರ 12 ಗ್ರಾಮಗಳು ಮತ್ತು (3) ತುರುವಿಹಾಳ್ ಮತ್ತು ಇತರ 33 ಗ್ರಾಮಗಳು, ಈ 3 ಗುಂಪಿನಲ್ಲಿರುವ ಜನವಸತಿಗಳಿಗೆ (ಕ್ಲಸ್ಟರ್‌ಗಳಿಗೆ) ತುಂಗಭದ್ರಾ ನದಿ / ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರು ಪೂರೈಕೆಗಾಗಿ ಅನುಕ್ರಮವಾಗಿ ರೂ.6.96 ಕೋಟಿ, ರೂ.8.48 ಕೋಟಿ ಮತ್ತು ರೂ.13.18 ಕೋಟಿ ಮೊತ್ತದ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 232(573)

ಸದಸ್ಯರ ಹೆಸರು: ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 67 ಎಸ್.ಇ.ಎಸ್. 2001 ದಿನಾಂಕ 10-07-2001ರಂತೆ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಮೇಲಿನ ಆದೇಶದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ? ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ. (ವಿವರ ನೀಡುವುದು)

ಉತ್ತರ

ಅ) 73.

ಆ) ಸಿಂಧನೂರು ತಾಲ್ಲೂಕಿಗೆ 4 ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಅವು ಈ ಕೆಳಗಿನಂತಿವೆ.

1. ಕೋಳಬಾಳ
2. ಪಗಡದಿನ್ನಿ
3. ದಡೇಸೂಗೂರು
4. ಗುಂದಾ

ರಾಯಚೂರು ಜಿಲ್ಲೆ ಮುದಗಲ್ ಪಟ್ಟಣದ ಸರ್ಕಾರಿ ಆಸ್ಪತ್ರೆ ಕಟ್ಟಡದ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 233(31)

ಸದಸ್ಯರ ಹೆಸರು: ಶ್ರೀ ಹಸನಸಾಬ್ ನಬೀಸಾಬ್ ದೋತಿಹಾಳ್(ಕುಷ್ಟಗಿ)

ಉತ್ತರಿಸುವ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಯಚೂರಿನ ಜಿಲ್ಲೆಯ ಮುದುಗಲ್ ಪಟ್ಟಣದ ಸರ್ಕಾರಿ ಆಸ್ಪತ್ರೆ ಕಟ್ಟಡದ ಕಾಮಗಾರಿ ಎಂದು ಪ್ರಾರಂಭಿಸಲಾಯಿತು.

ಆ) ಕಟ್ಟಡದ ಕಾಮಗಾರಿ ಅಪೂರ್ಣ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು; ರೋಗಿಗಳ ಶುಶ್ರೂಷೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಉತ್ತರ

ಅ) ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣಕ್ಕೆ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾಗಿದ್ದು 93-94ರಲ್ಲಿ ಕಟ್ಟಡದ ಕಾಮಗಾರಿ ಪ್ರಾರಂಭಿಸಲಾಗಿದೆ.